**ಪಿ ಡಬ್ಲೂ : 1**

ಸಾಕ್ಷಿಗೆ ದಿನಾಂಕಃ **18.08.2025** ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಎದುರುದಾರರರ ಪರಃ ಶ್ರೀ ಕೆ.ವಿ.ಎಸ್ ವಕೀಲರಿಂದ:**

ನಾನು ನಿವೃತ್ತಿ ಹೆಚ್.ಎಂ.ಟಿ. ನೌಕರ ಅಗಿದ್ದು, 2011 ರಲ್ಲಿ ನಿವೃತ್ತಿ ಹೊಂದಿದ್ದು, ಆನಂತರ ವ್ಯವಸಾಯ ವೃತ್ತಿ ಮಾಡುತ್ತಿದ್ದೇನೆ. ನನ್ನ ತಂದೆಯ ಹೆಸರು ಮಾದೇಗೌಡ ಎಂದರೆ ಸರಿ. ನನ್ನ ತಂದೆಗೆ ಮೊದಲನೇ ಪತ್ನಿ ನಂಜಮ್ಮ ಅಗಿದ್ದು, ಎರಡನೇ ಪತ್ನಿ ಚೆನ್ನಮ್ಮ ಎಂದರೆ ಸರಿ. ದಿನಾಂಕ 18.02.2025 ರಲ್ಲಿ ಸದರಿ ಚೆನ್ನಮ್ಮ ರವರು ಮೃತರಾಗಿರುತ್ತಾರೆ. ನನ್ನ ತಂದೆಯ ತಾಯಿಯ ಹೆಸರು ಮಾದಮ್ಮ ಎಂದರೆ ಚೆನ್ನಮ್ಮ ಅಗಿರುತ್ತದೆ. ನಂಜೇಗೌಡ ಮತ್ತು ಚೆನ್ನಮ್ಮ ಪತಿ, ಪತ್ನಿಯರಾಗಿರುತ್ತಾರೆ. ನಂಜೇಗೌಡರಿಗೆ ಮೊದಲನೇ ಪತ್ನಿ ಮಾದಮ್ಮ ಮತ್ತು ಎರಡನೇ ಪತ್ನಿ ಚೆನ್ನಮ್ಮ ಎಂದರೆ ಅವರಿಗೆ ಚೆನ್ನಮ್ಮ ಎಂಬ ಏಕೈಕ ಪತ್ನಿ ಇರುತ್ತಾರೆ. ನನ್ನ ತಂದೆಯು ಮೊದಲನೇ ಪತ್ನಿ ಮಾದಮ್ಮರವರ ಮಗನು ಎಂದರೆ ಸರಿಯಲ್ಲ. ಚೆನ್ನಮ್ಮ ರವರಿಗೆ ನಂಜಮ್ಮ ಎಂಬ ಒಬ್ಬರೇ ಮಗಳು ಎಂದರೆ ಸರಿ. ನಂಜಮ್ಮ ರವರ ಪತಿಯ ಹೆಸರು ಮರಿಮಾದೇಗೌಡ ಎಂದು ಇರಬಹುದು, ಅವರ ಊರಿನ ಬಗ್ಗೆ ಗೊತ್ತಿರುವುದಿಲ್ಲ. ಮರಿಮಾದೇಗೌಡರಿಗೆ ಎದುರುದಾರರು ಮಕ್ಕಳು ಅಗಿರುತ್ತಾರೆ ಎಂದರೆ ಸರಿ. ನಾನು ಮತ್ತು ಎದುರುದಾರರು ಒಂದೇ ತಾಯಿಯ ಮಕ್ಕಳು ಅಲ್ಲ ಎಂದರೆ ಸರಿಯಲ್ಲ.

2) ಉಪ ವಿಭಾಗಧಿಕಾರಿಗಳ ನ್ಯಾಯಾಲಯದಲ್ಲಿ ನಾನು ಅರ್.ಮಿಸ್ ಮೇಲ್ಮನವಿಯಲ್ಲಿ ಸಾಕ್ಷಿದಾರರ ವಿಚಾರಣೆ ಮಾಡಿಸಿರುವುದಿಲ್ಲ. ನಾನು ಅರ್ಜಿಯನ್ನು ಸಲ್ಲಿಸುವ ಕಾಲಕ್ಕೆ ಸಾಕ್ಷಿದಾರರ ಪಟ್ಟಿಯನ್ನು ಹಾಜರುಪಡಿಸಿರುತ್ತೇನೆ. ಸಾಕ್ಷಿದಾರರಾದ ಶಿವಣ್ಣ ರವರ ತಂದೆಯ ಹೆಸರು ಗೊತ್ತಿದ್ದು, ತಾಯಿಯ ಹೆಸರು ಗೊತ್ತಿರುವುದಿಲ್ಲ. ಸದರಿಯವರು ಬಸವನಹಳ್ಳಿ ಗ್ರಾಮದಲ್ಲಿ ವಾಸವಿರುತ್ತಾರೆ. ಸದರಿಯವರು ದಾಯಾದಿಗಳಲ್ಲಿ ನನಗೆ ತಮ್ಮನಾಗ ಬೇಕು. ತಂದೆ ಕಡೆಯಿಂದ ಸದರಿ ಶಿವಣ್ಣ ರವರು ನನಗೆ ತಮ್ಮನಾಗಬೇಕು. ಶಿವಣ್ಣ ರವರ ತಾತನ ಹೆಸರು ನನಗೆ ನೆನಪಿರುವುದಿಲ್ಲ. ಎರಡನೇ ಸಾಕ್ಷಿದಾರರಾದ ಬಸವರಾಜು ನನ್ನ ತಾಯಿಯ ಅಣ್ಣ ಮಗ ಅಗಿರುತ್ತಾರೆ. ನನ್ನ ತಾಯಿಯ ಅಣ್ಣನ ಹೆಸರು ಮಲ್ಲಯ್ಯ ಅಗಿದ್ದು, ಅವರಿಗೆ ಎಷ್ಟು ಜನ ಸಹೋದರರು ಎಂದು ನೆನಪಿರುವುದಿಲ್ಲ. ನನ್ನ ತಾಯಿಗೆ ಒಬ್ಬರು ಅಣ್ಣ ಇದ್ದು, ಉಳಿದ ಸಹೋದರ ಸಹೋದರಿಯರ ಬಗ್ಗೆ ನನಗೆ ಗೊತ್ತಿರುವುದಿಲ್ಲ.

ಸಾಕ್ಷಿದಾರರ ಶಿವಣ್ಣ ಮತ್ತು ಬಸವರಾಜು ವ್ಯವಸಾಯ ವೃತ್ತಿ ಮಾಡುತ್ತಾರೆ. ನಾನು ರಾಜಕೀಯ ಪಕ್ಷದಲ್ಲಿ ಸಕ್ರಿಯವಾಗಿ ಭಾಗಿವಹಿಸುವುದಿಲ್ಲ, ಸಾಕ್ಷಿದಾರರು ರಾಜಕೀಯ ಪಕ್ಷದಲ್ಲಿ ಇರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಾನು ಮತ್ತು ಸಾಕ್ಷಿದಾರರು ಹತ್ತಿರದ ಸಂಬಂದಿಕರು ಮತ್ತು ಒಂದೇ ರಾಜಕೀಯ ಪಕ್ಷದವರು ಅಗಿದ್ದು, ಅದ್ದರಿಂದ ಸುಳ್ಳು ಸಾಕ್ಷ್ಯವನ್ನು ನುಡಿಸಲೀ ನಾನು ಅವರ ಹೆಸರನ್ನು ತಂದಿರುತ್ತೇನೆ ಎಂದರ ಸರಿಯಲ್ಲ.

3) ನಾನು ಎರಡು ಪಿತ್ರಾರ್ಜಿತ ಸ್ವತ್ತುಗಳನ್ನು ಈ ಅರ್ಜಿಯಲ್ಲಿ ಸೇರಿಸಿರುತ್ತೇನೆ. ಅದರ ಸರ್ವ ನಂ.235/1 ಇರಬಹುದು ವಿಸ್ತೀರ್ಣ ಗೊತ್ತಿರುವುದಿಲ್ಲ. ಮತ್ತೊಂದು ಅಸ್ತಿಯ ಸರ್ವೆ ನಂಬರ್ 236/3 ಮತ್ತು ವಿಸ್ತೀರ್ಣ 12 ಗುಂಟೆ ಇರಬಹುದು. ಸದರಿ ಎರಡು ಸ್ವತ್ತುಗಳು ಖುಷಿ ಜಮೀನುಗಳು ಅಗಿರುತ್ತವೆ.ಈ ಎರಡು ಸ್ವತ್ತುಗಳನ್ನು ಹೊರತುಪಡಿಸಿ ನನ್ನ ತಂದೆಗೆ ಬಂದಿರುವ ಪಿತ್ರಾರ್ಜಿತ ಸ್ವತ್ತು ಇದ್ದು ಎಷ್ಟು ವಿಸ್ತೀರ್ಣ ಇದೆ ಎಂದು ಮತ್ತು ಎಷ್ಟು ಅಸ್ತಿಗಳು ಇರುತ್ತವೆ ಎಂದು ನನಗೆ ಗೊತ್ತಿರುವುದಿಲ್ಲ, ಅದರೆ ಪಿತ್ರಾರ್ಜಿತ ಸ್ವತ್ತುಗಳು ಇರುತ್ತವೆ. ಸದರಿ ಸ್ವತ್ತುಗಳ ವಿವರಗಳನ್ನು ತಿಳಿದು ಅವುಗಳನ್ನು ಈ ಅರ್ಜಿಗೆ ಸೇರಿಸಲು ನನಗೆ ತೊಂದರೆ ಇರಲಿಲ್ಲ. ನಾನು ಎ.ಸಿ. ರವರ ನ್ಯಾಯಾಲಯದಲ್ಲಿ ಮತ್ತು ಈ ನ್ಯಾಯಾಲಯದಲ್ಲಿ ಸರಿಯಾದ ವಂಶವೃಕ್ಷವನ್ನು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಎ.ಸಿ. ರವರು ವಂಶವೃಕ್ಷವನ್ನು ಪರಿಶೀಲಿಸಿ ನಮ್ಮ ಮೇಲ್ಮನವಿಯನ್ನು ಪೂರಸ್ಕರಿಸಿ ಮೂಲ ಖಾತೆದಾರರ ಹೆಸರಿನಲ್ಲಿ ಖಾತೆ ಇಡಲು ಅದೇಶ ಮಾಡಿರುತ್ತಾರೆ. ನನ್ನ ಪ್ರಕಾರ ಎ.ಸಿ. ರವರು ಮಾಡಿರುವ ಆದೇಶ ಸರಿಯಾಗಿ ಇರುತ್ತದೆ.

ಮರು ವಿಚಾರಣೆ ಇಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಮಳವಳ್ಳಿ